



ಕವಿಜೋಡಿಯ ಆತ್ಮಗೀತ
ಕಥಾಕಾವ್ಯ
ಲೇ: ನಟರಾಜ್ ಹುಳಿಯಾರ್
ಪು: 130 ಬೆ: ₹ 120
ಪ್ರ: ಪಲ್ಲವ ಪ್ರಕಾಶನ
ಚನ್ನಪಟ್ಟಣ ಅಂಚೆ,
ವಯಾ ಎಮ್ಮಿಗನೂರ,
ಬಳ್ಳಾರಿ – 583 113
ದೂರವಾಣಿ: 88800 87235

ಅಲೌಕಿಕ ಮತ್ತು ಶುದ್ಧ ಲೌಕಿಕ ನೆಲೆಗಳಲ್ಲಿ ನಿರೂಪಿಸಿದ್ದಾರೆ. ಕೃತಿಯ ಯಶಸ್ಸಿರುವುದು, ಅದನ್ನು ಎಲ್ಲ ಗಂಡು ಹೆಣ್ಣುಗಳ ಸಂಬಂಧದ ಭಿತ್ತಿಯಲ್ಲಿಡುತ್ತಲೇ ಅದು ಯಾಕೆ ದೈವಿಕ ಎನ್ನುವುದನ್ನು ಹೇಳುವುದಕ್ಕೆ ಸಾಧ್ಯವಾಗಿರುವುದರಲ್ಲಿ.

ಇದು ಸಾಧ್ಯವಾಗಿರುವುದು, ಟೆಡ್ಡಿ ಮತ್ತು ಸೆಲ್ವಿಯಾ ಇಬ್ಬರೂ ತಮತಮಗೆ ಬೇಕಾದ ಸ್ಪೇಸ್ ಅನ್ನು ಇದು ತನಗೆ ಬೇಕು ಎನ್ನುವ ಅರಿವಿನಲ್ಲಿ, ಅದನ್ನು ಪಡೆಯುವಾಗಿನ ಹೋಗುತ್ತ ಕೊಯ್ಯುವ ಬರುತ್ತ ಕೊಯ್ಯುವ ಹಿಂಸೆಯನ್ನು ಎದುರಿಸಿಯೂ ಪಡೆಯುವುದರಲ್ಲಿ. ಯಾವುದು ಲೋಕೋತ್ತರ, ಆಚಂದ್ರಾರ್ಕ ಎಂದು ತಿಳಿದಿದ್ದರೋ ಆ ಸಂಬಂಧ ಅಕಾರಣವಾಗಿಯೋ ಸಕಾರಣವಾಗಿಯೋ ಮುರಿದು ಬಿದ್ದಾಗಲೂ ಪಡೆದದ್ದರ ಬಗ್ಗೆ ಅವರಿಗಿದ್ದ ಕೃತಜ್ಞತೆ, ಪಡೆದದ್ದನ್ನೇ ತಮ್ಮ ಜೀವದ್ರವ್ಯವಾಗಿಸಿಕೊಂಡು ತಮ್ಮ ಕಾವ್ಯವನ್ನು ಕಟ್ಟಿದ್ದರಲ್ಲಿ. ಸಂಬಂಧವೊಂದು ಮುರಿದು ಬಿದ್ದಾಗ ಯಾವುದು ಜನ್ಮಜನ್ಮಾಂತರಗಳ ದ್ವೇಷವಾಗಿ ಜೀವವಿರೋಧಿಯಾಗುತ್ತದೋ ಅದು ಇವರಿಬ್ಬರ ಸಂಬಂಧದಲ್ಲಿ ಆಗುವುದಿಲ್ಲ. ನಾಗರಿಕರಾಗಿ, ಕರ್ತವ್ಯಪ್ರಜ್ಞೆಯಲ್ಲಿ ಮಾತ್ರ ಉಳಿಯುವ ಹೊಣೆಗಾರಿಕೆ ಇಲ್ಲಿ ನಿರ್ಣಾಯಕವಲ್ಲ. ಆಳದಲ್ಲಿ ಇದೊಂದು ಆತ್ಮಸಖ್ಯ ಎನ್ನುವ ಅರಿವು ಜೀವಂತವಾಗಿದ್ದುದರಿಂದಲೇ ಅದು ಅಪರೂಪದ್ದು. ಸಂಬಂಧವೊಂದು ಅಳಿದು ಹೋದಾಗಲೂ ಅದನ್ನು ಸ್ಮೃತಿಕೋಶದಲ್ಲಿ ಕಾಪಿಟ್ಟುಕೊಳ್ಳುವುದಕ್ಕೆ ತನ್ನ ಬಗೆಗೂ ಅವನ/ಳ ಬಗೆಗೂ ಕೇವಲ ಪ್ರೀತಿ ಮಾತ್ರ ಸಾಕಾಗುವುದಿಲ್ಲ, ಆ ಜೀವದ ಬಗೆಗೆ ಕಾಳಜಿ, ಗೌರವ ಎಲ್ಲವೂ ಇರಬೇಕು. ಇದು ಟೆಡ್ ಹ್ಯೂಸ್ ಮತ್ತು ಸಿಲ್ವಿಯಾಗೆ ಸಾಧ್ಯವಾಗಿದ್ದು ಕಾವ್ಯದ ಸಂವೇದನೆಯಿಂದಲೇ ಇರಬೇಕು. ತಮ್ಮ ತಮ್ಮ ದೌರ್ಬಲ್ಯಗಳ ಬಗ್ಗೆ ಇಬ್ಬರಿಗೂ ಗೊತ್ತಿತ್ತು. ಅದು ತಮ್ಮ ಸಂಬಂಧವನ್ನೇ ಮುಗಿಸಿಬಿಡಬಹುದು ಎನ್ನುವ ಅಪಾಯದ ಅರಿವಿದ್ದೂ ಅದನ್ನು ನಿಭಾಯಿಸುವಲ್ಲಿ ಇಬ್ಬರೂ ಸೋಲುತ್ತಾರೆ. ಆದರೆ, ಇದನ್ನು ಸೋಲು ಎನ್ನಬಹುದೆ? ಎಲ್ಲ ಸಂಬಂಧಗಳಿಗೂ ಅದರದೇ ಆಯಸ್ಸು ಇರುತ್ತದೆ, ಅದು ತೀರಿದ ಮೇಲೆ ಅದನ್ನು ಉಳಿಸಿಕೊಂಡರೂ ಅದು ಜೀವಚ್ಛವ. ಇವರಿಬ್ಬರೂ ಅದನ್ನು ಉಳಿಸಿಕೊಂಡಿದ್ದರೂ ಅದು ಒಬ್ಬರು ಇನ್ನೊಬ್ಬರನ್ನು ಇರಿದು ಕೊಲ್ಲುವ ನಿತ್ಯಕಾಳಗದ